# ಒಳಗಣ್ಣಿನ ಬೆಳಕಲ್ಲಿ...

ಕಣ್ಣು ಮನುಷ್ಯನ ಪ್ರಧಾನ ಅಂಗ. ಕಣ್ಣಿಲ್ಲದಿದ್ದರೂ ದಿಟ್ಟತನ ಇದ್ದರೆ ಸಾಧಿಸಬಹುದು ಎಂದು ತೋರಿಸಿಕೊಟ್ಟ ಮಹಿಳೆಯೊಬ್ಬರ ಪರಿಚಯವಿದು. ಅವರೇ ಸ್ವರ್ಣಾ ಪೈ.

ದಕ್ಷಿಣ ಕನ್ನಡ ಜಿಲ್ಲೆಯ ಕಡಬದಲ್ಲಿ ಜನಿಸಿದ ಸ್ವರ್ಣಾ ಅವರ ತಂದೆ ರಘುನಾಥ ಪೈ ವ್ಯಾಪಾರಿಯಾಗಿದ್ದರು. ತಾಯಿ ಆಶಾ ಪೈ ಗೃಹಿಣಿ. ಸ್ವರ್ಣಾ ಅವರು ಜನಿಸುವಾಗ ಸಾಮಾನ್ಯರಂತಿದ್ದು, ಮೂರರ ವಯಸ್ಸಿನಲ್ಲಿ ಕಣ್ಣಿನ ಒತ್ತಡ ಹೆಚ್ಚಾಗಿ, ನರದ ದೌರ್ಬಲ್ಯದಿಂದ ಅಂಧತ್ವ ಆವರಿಸಿತು. ಹಳ್ಳಿಯಲ್ಲಿದ್ದ ಅವರಿಗೆ ಬ್ರೈಲ್ ಲಿಪಿ ಕಲಿಯುವುದೂ ಶಾಲೆಗೆ ಹೋಗುವುದೂ ಅಸಾಧ್ಯವಾಯಿತು.

ಬಾಲ್ಯಕಾಲದಲ್ಲಾದ ಪಿತೃವಿಯೋಗದ ಬಳಿಕ ಅವರ ಕುಟುಂಬವು ಮಂಗಳೂರಿನ ಬಳಿಯ ಕೃಷ್ಣಾಪುರಕ್ಕೆ ಸ್ಥಳಾಂತರಗೊಂಡಿತು. ತಾಯಿ, ಒಬ್ಬ ಅಣ್ಣ ಮತ್ತು ಇಬ್ಬರು ತಂಗಿಯರು ಅವರಿಗಿದ್ದರು. ತಾನು ಏನನ್ನಾದರೂ ಸಾಧಿಸಬೇಕೆಂಬ ಆಸೆ ಅವರಲ್ಲಿತ್ತು. ಅವರ ತಾಯಿ ಅವರಿಗೆ ಸ್ವತಂತ್ರವಾಗಿ ದೈನಂದಿನ ಕೆಲಸಗಳನ್ನು ಮಾಡಲು ಕಲಿಸಿದರು.

ಸ್ವರ್ಣಾ ಅವರು ಅದಮ್ಯವಾದ ವಿದ್ಯಾಭ್ಯಾಸದ ಆಸಕ್ತಿಯಿಂದ ಮನೆಯಲ್ಲಿ ಹಟ ಮಾಡಿ ವಿದ್ಯಾಭ್ಯಾಸ ಮಾಡಲು ಬೆಂಗಳೂರಿಗೆ ಹೋಗಿ ಮಿತ್ರಜ್ಯೋತಿ ಎಂಬ ಶಾಲೆಗೆ ಸೇರಿದರು. ಅಲ್ಲಿ ಅವರು ಸ್ವಾವಲಂಬನೆಯ ಪಾಠ ಕಲಿತರು. ಮಾತನಾಡುವ ಕಲೆಯನ್ನರಿತರು. ನಾಲ್ಕು ತಿಂಗಳು ಅಲ್ಲಿದ್ದು ಬಳಿಕ 1999ರಲ್ಲಿ ದೆಹಲಿಗೆ ಹೋದರು. ಅಲ್ಲಿ ರಾಷ್ಟ್ರೀಯ ಅಂಧರ ಶಾಲೆಯಲ್ಲಿ ಸೇರ್ಪಡೆಗೊಂಡು ಐದು ವರ್ಷ ವಿದ್ಯಾಭ್ಯಾಸ ಮಾಡಿದರು. 2004ರಲ್ಲಿ ಸೀನಿಯರ್ ಸೆಕೆಂಡರಿ ಸರ್ಟಿಫಿಕೇಟ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅಲ್ಲಿ ತಮ್ಮ ನಾಯಕತ್ವದ ಗುಣದಿಂದ ಶಿಕ್ಷಕರ ಮೆಚ್ಚುಗೆಗೆ ಪಾತ್ರರೆನಿಸಿದರು.

ಎ.ಪಿ.ಜೆ. ಅಬ್ದುಲ್ ಕಲಾಂ ಅವರು ರಾಷ್ಟ್ರಪತಿಯಾದಾಗ, ಅವರ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಸಾಕ್ಷಿಯಾಗಲು ಇವರ ಶಾಲೆಯಿಂದ ಆರು ಮಂದಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿದ್ದರು. ಸ್ವರ್ಣಾ ಅವರಲ್ಲೊಬ್ಬರಾಗಿದ್ದರು. ಅಲ್ಲಿ ಕಲಾಂ ಅವರು, ‘2020ರಲ್ಲಿ ನೀವು ಏನಾಗಬಯಸುತ್ತೀರಿ?’ ಎಂದು ಎಲ್ಲರನ್ನೂ ಕೇಳಿದರು. ಅದಕ್ಕೆ ಸ್ವರ್ಣಾ ಅವರು, ‘2020ರಲ್ಲಿ ನಮ್ಮ ಊರಲ್ಲಿ ಒಂದು ಸರ್ಕಾರೇತರ ಸೇವಾ ಸಂಸ್ಥೆಯನ್ನು ತೆರೆದು, ದೃಷ್ಟಿಹೀನರಿಗೆ ನೆರವಾಗಬೇಕು ಎಂಬುದು ನನ್ನ ಗುರಿ’ ಎಂದಿದ್ದರು!



2007ರಲ್ಲಿ ಬೆಂಗಳೂರಲ್ಲಿ ಕಂಪ್ಯೂಟರ್ ತರಬೇತಿ ಪಡೆದ ಅವರು ಅಲ್ಲಿ ಪರಿಚಿತರಾದ ಮುತ್ತುರಾಜ್ ಅವರನ್ನು ಪ್ರೇಮಿಸಿ ವಿವಾಹವಾದರು. ಮುತ್ತುರಾಜ್ ಅವರು ದಿವ್ಯಾಂಗರಿಗೆ ತರಬೇತಿ ನೀಡುವ ಶಿಕ್ಷಕರಾಗಿ, ಸಮಾಜಸೇವಾ ಕಾರ್ಯಕರ್ತರಾಗಿದ್ದಾರೆ. ವಿವಾಹಿತರಾದ ಬಳಿಕ ಪುದುಚೆರಿಯಲ್ಲಿದ್ದ ಸ್ವರ್ಣಾ 2016ರಲ್ಲಿ ಬೆಂಗಳೂರಿಗೆ ಬಂದು ಕಾಲ್‌ಸೆಂಟರ್‌ನಲ್ಲಿ ಉದ್ಯೋಗಿಯಾದರು. ಪತಿ ಬೆಂಗಳೂರಲ್ಲಿ ಉದ್ಯೋಗಿಯಾಗಿದ್ದರು.

ನಂತರ ಮಂಗಳೂರಿಗೆ ತೆರಳಿದ್ದ ಅವರು, 2020ರಲ್ಲಿ ಕೊನೆಗೂ ತಮ್ಮ ಕನಸಿನ ಸೇವಾಸಂಸ್ಥೆಯನ್ನು ಸ್ಥಾಪಿಸಿಯೇಬಿಟ್ಟರು. ‘ಸರ್ವಮಂಗಳ ಟ್ರಸ್ಟ್’ ಎಂಬ ಹೆಸರಲ್ಲಿ ಸಂಸ್ಥೆ ಸ್ಥಾಪನೆಯಾದರೂ ಕೋವಿಡ್ ಕಾರಣದಿಂದ ಕೆಲವು ಆನ್‌ಲೈನ್ ತರಗತಿಗಳನ್ನು ಮಾತ್ರ ಮಾಡಲು ಸಾಧ್ಯವಾಯಿತು. 2024ರಿಂದ ಸುರತ್ಕಲ್‌ನ ಹಿಂದೂ ವಿದ್ಯಾದಾಯಿನಿ ಸಂಘವು ಇತ್ತ ಕಟ್ಟಡದಲ್ಲಿ ಸಂಸ್ಥೆ ಕಾರ್ಯಾಚರಿಸುತ್ತಿದೆ. ಶಾರೀರಿಕ ಮತ್ತು ಬೌದ್ಧಿಕ ನ್ಯೂನತೆಯಿರುವವರಿಗೆ ಔದ್ಯೋಗಿಕ ತರಬೇತಿ ಮತ್ತು ಮಾರ್ಗದರ್ಶನ ಮಾಡುತ್ತಿದೆ.

—ಎಸ್.ಕೆ. ಗೋಪಾಲಕೃಷ್ಣ ಭಟ್, ಮಂಗಳೂರು

# ಸಾಹಿತ್ಯ ಸೇವೆಯಲ್ಲಿ ಪ್ರಮೀಳಾ ಮೊಹರು

ಸಾಧಿಸುವ ಮನಸ್ಸಿದ್ದರೆ ವಯಸ್ಸು ಅಡ್ಡಿಯಾಗದು ಎಂಬುದಕ್ಕೆ ಎಪ್ಪತ್ನಾಲ್ಕರ ಹರೆಯದ ಉತ್ಸಾಹಿ ಡಾ. ಪ್ರಮೀಳಾ ಮಾಧವ್ ಅವರು ಉತ್ಕೃಷ್ಟ ಉದಾಹರಣೆ.

ಕಾಸರಗೋಡಿನಲ್ಲಿ ಜನಿಸಿದ ಇವರು, ಹಲವು ಪ್ರತಿಕೂಲತೆಗಳನ್ನು ಮೆಟ್ಟಿ ನಿಂತು ಕನ್ನಡದಲ್ಲಿ ಎಂ.ಎ., ಪಿಎಚ್.ಡಿ. ಪಡೆದರು. ಕನ್ನಡ ಪ್ರಾಧ್ಯಾಪಕರಾಗಿ ನಿವೃತ್ತರಾದರು. ಆಮೇಲೂ ವಿರಮಿಸಲಿಲ್ಲ. ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿಕೊಡಲು ನಿರ್ಧರಿಸಿದರು. 2017ರಲ್ಲಿ ಹೆತ್ತವರ ಹೆಸರಿನಲ್ಲಿ ಶಂಪಾ ಪ್ರತಿಷ್ಠಾನ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಡಾ. ಸಿದ್ದಲಿಂಗಯ್ಯನವರ ಮಾರ್ಗದರ್ಶನದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದರು.

ಕೊರೊನಾ ನಂತರ ಆನ್‌ಲೈನ್ ಮೂಲಕ ಹಳಗನ್ನಡ ಕಾವ್ಯ ತರಗತಿಗಳನ್ನು ಆರಂಭಿಸಿದರು. ಪ್ರತಿ ಭಾನುವಾರ ಸಾಹಿತ್ಯ ಮತ್ತು ಸಂಗೀತ ಸಂಜೆ ಕಾರ್ಯಕ್ರಮವನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಅವರ ಬದ್ಧತೆ ಅನನ್ಯ. ಮೊದಲ ವರ್ಷದ ಈ ಸರಣಿ ಉಪನ್ಯಾಸಗಳನ್ನು ‘ಚಿಂತನ ಸೌರಭ’ ಶೀರ್ಷಿಕೆಯಡಿ ಸಂಕಲಿಸಿ ಪ್ರಕಟಿಸಿದ್ದಾರೆ. ಎರಡನೆಯ ವರ್ಷದ ಉಪನ್ಯಾಸಗಳ ಸಂಕಲನ ‘ಚಿಂತನ ಸುರಭಿ’ಯನ್ನು ಪ್ರಕಟಣೆಗೆ ಅಣಿಗೊಳಿಸಿದ್ದಾರೆ.

ಇಷ್ಟೇ ಅಲ್ಲದೆ ಇವರು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ 70ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಅನೇಕ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡು ತಮ್ಮ ಜ್ಞಾನ ಮತ್ತು ಅನುಭವವನ್ನು ಹಂಚಿಕೊಂಡಿದ್ದಾರೆ. ಒಳನಾಡು ಹಾಗು ಗಡಿನಾಡು ಕಾಸರಗೋಡಿನ ನಡುವಿನ ಕೊಂಡಿಯಾಗಿದ್ದಾರೆ. ಹಲವಾರು ಸಂಘ ಸಂಸ್ಥೆಗಳಲ್ಲಿ ಸಕ್ರಿಯರಾಗಿದ್ದಾರೆ. ಇವೆಲ್ಲವನ್ನೂ ಡಾ. ಪ್ರಮೀಳಾ ಮಾಧವ್ ಸದ್ದಿಲ್ಲದೆ ಸಾಧಿಸಿದ್ದಾರೆ.

—ಮಂಜುನಾಥ ಡಿ.ಎಸ್., ಬೆಂಗಳೂರು

## ಮೂರ್ಖರಾದ ಆ ದಿನ!



ಮೂರ್ಖರಾಗುವ ಪ್ರಸಂಗ ಎಲ್ಲರ ಜೀವನದಲ್ಲಿ ಒಮ್ಮೆಯಾದರೂ ನಡೆದೇ ಇರುತ್ತದೆ. ಏನೇ ಜಾಣತನದಿಂದಿದ್ದರೂ ನಾವೆಷ್ಟೇ ಚಾಲಾಕಿ ಎಂದುಕೊಂಡಿದ್ದರೂ ಗೊತ್ತೋ ಗೊತ್ತಿಲ್ಲದೆಯೋ ಬೇಸ್ತು ಬೀಳುವ ಸಂಗತಿಯಂತೂ ಸಂಭವಿಸಿಯೇ ಇರುತ್ತದೆ. ಅದು ಆ ಕ್ಷಣಕ್ಕೆ ಮುಜುಗರ, ಬೇಸರ, ಕೋಪ ತರಿಸಿದ್ದರೂ ಕಾಲ ಕಳೆದಂತೆ ಒಂದು ನೆನಪಾಗಿ, ಮನದಲ್ಲಿ ನಗು ಮೂಡಿಸುತ್ತದೆ. ಅಂಥ ಸ್ವಾರಸ್ಯಕರ ಪ್ರಸಂಗ ನಿಮ್ಮ ಜೀವನದಲ್ಲಿಯೂ ನಡೆದಿದೆಯೇ? ನೀವು ಮೂರ್ಖರಾದ ಆ ಸಂಗತಿ ಯಾವುದು? ನಿಮ್ಮ ಅನುಭವವನ್ನು ‘ಸುಧಾ’ದೊಂದಿಗೆ ಹಂಚಿಕೊಳ್ಳಬಹುದು. ಬರಹ ನುಡಿ ಅಥವಾ ಯುನಿಕೋಡ್‌ನಲ್ಲಿ 150 ಪದಮಿತಿಯಲ್ಲಿರಲಿ. ಕೊನೆಯ ದಿನಾಂಕ ಏಪ್ರಿಲ್ 30. ಬರಹ ಕಳುಹಿಸಬೇಕಾದ ವಿಳಾಸ: editorsu@sudha.co.in